

# ಸೈಫ್ ಎಂಬ ವಿಲನ್!

ಸೈಫ್ ಅಲಿ ಖಾನ್ ಮತ್ತೆ 'ವಿಲನ್' ಆಗಿ ಮೆರೆದಿದ್ದಾನೆ. ಆದರೆ ಸಿನಿಮಾದಲ್ಲಲ್ಲ; ನಿಜಜೀವನದಲ್ಲಿ! ಒಂದು ಕಾಲದಲ್ಲಿ ನಿಜಜೀವನದಲ್ಲಿ ವಿಲನ್‌ನಂತೆ ವರ್ತಿಸಿ, ಸಿನಿಮಾದಲ್ಲಿ ಮಾತ್ರ ಹೀರೋ ಆಗಿದ್ದ ಸಂಜಯ್ ದತ್ ಈಗ ನಿಜಜೀವನದಲ್ಲಿ ಹೀರೊ ಆಗಿ ಸಿನಿಮಾದಲ್ಲಿ ವಿಲನ್ ಆಗಿದ್ದಾನೆ. ಆದರೆ ಸೈಫ್‌ನದ್ದು ಉಲ್ಟಾ! ಸಿನಿಮಾದಲ್ಲಿ ಮಾತ್ರ ಹೀರೋ ಆಗಿರುವ ಸೈಫ್, ನಿಜಜೀವನದಲ್ಲಿ ಪದೇ ಪದೇ ವಿಲನ್ ಆಗಿ ಕಂಗೊಳಿಸುತ್ತಿದ್ದಾನೆ.

ಮುಂಬೈಯ ಕೊಲಾಬಾದ ತಾಜ್ ಹೋಟೆಲ್‌ನಲ್ಲಿ ವಸಾಬಿ ರೆಸ್ಟೋರೆಂಟ್ ನಲ್ಲಿ ಮಧ್ಯರಾತ್ರಿ ಕುಡಿದ ಅಮಲಿನಲ್ಲಿದ್ದ ಸೈಫ್, ಮಧ್ಯವಯಸ್ಸಿನ ಉದ್ಯಮಿಯೊಬ್ಬನ ಮೇಲೆ ವಿನಾಕಾರಣ ಕೈ ಎತ್ತಿದ್ದು, ಮೆಟ್ಟಿಲಿನಿಂದ ಕೆಳಕ್ಕೆ ತಳ್ಳಿದ್ದು ಆತನ ಸೊಕ್ಕನ್ನಷ್ಟೇ ಎತ್ತಿ ತೋರಿದೆ. ಸಕಾರಣವಾಗಿದ್ದರೆ ಇದನ್ನು ದೊಡ್ಡದೆಂದು ಯಾರೂ ಬಿಂಬಿಸುತ್ತಿರಲಿಲ್ಲ. ಆದರೆ ಕ್ಷುಲ್ಲಕ ಕಾರಣಕ್ಕೆ ಸೈಫ್ ಹಲ್ಲೆ ನಡೆಸಿ ಈಗ ಪೊಲೀಸ್ ಠಾಣೆಯ ಮೆಟ್ಟಿಲು ಹತ್ತಿ ಬಂದಿದ್ದಾನೆ.

ಮಧ್ಯರಾತ್ರಿ ರೆಸ್ಟೋರೆಂಟ್‌ನಲ್ಲಿ ಸೈಫ್ ಜತೆ ಪ್ರಿಯತಮೆ ಕರೀನಾ, ಆಕೆಯ ಅಕ್ಕ ಕರಿಷ್ಮಾ, ಅಮೃತಾ ಅರೋರಾ ಮತ್ತು ಆಕೆಯ ಗಂಡ ಶಕೀಲ್ ಲಡಾಖ್ ಇದ್ದರಂತೆ. ಪಕ್ಕದ ಟೇಬಲ್‌ನಲ್ಲಿ ದಕ್ಷಿಣ ಆಫ್ರಿಕಾದಲ್ಲಿ ಉದ್ಯಮಿಯಾಗಿರುವ ಇಕ್ಬಾಲ್ ನವೀನ್ ಶರ್ಮಾ ಎಂಬ ಮಧ್ಯವಯಸ್ಕ ತನ್ನ ಪತ್ನಿ ಹಾಗೂ ಅತ್ತೆ ಮಾವಂದಿರ ಜತೆಗೆ ಕುಳಿತಿದ್ದ. ಅವತ್ತು ಇಕ್ಬಾಲ್ ಶರ್ಮಾನ ಜನ್ಮದಿನ. ಅದಕ್ಕೆಂದೇ ಹೊರಗೆ ರೆಸ್ಟೋರೆಂಟ್‌ನಲ್ಲಿ ಊಟಕ್ಕೆ ಬಂದಿದ್ದರು. ಆದರೆ ಸೈಫ್ ಅಲಿ ಖಾನ್‌ನ ಟೇಬಲ್‌ನಲ್ಲಿ ಜೋರು ಗದ್ದಲ, ಗಲಾಟೆಯಿಂದಾಗಿ ಇಕ್ಬಾಲ್ ಕುಟುಂಬ ಕಿರಿಕಿರಿ ಅನುಭವಿಸಿದೆ. ಮ್ಯಾನೇಜರ್‌ನನ್ನು ಕರೆದು ಇಕ್ಬಾಲ್, ಪಕ್ಕದ ಟೇಬಲ್‌ನವರಿಗೆ ಗದ್ದಲ ಕಡಿಮೆ ಮಾಡುವಂತೆ ಸೂಚಿಸಿದ್ದಾನೆ. ಮ್ಯಾನೇಜರ್ ಹೋಗಿ ಹೇಳಿದರೂ ಸೈಫ್ ಮತ್ತು ತಂಡ ಕ್ಯಾರೇ ಎಂದಿಲ್ಲ. ಕೊನೆಗೆ ಇಕ್ಬಾಲ್ ಶರ್ಮಾ ತನ್ನವರ ಜತೆಗೆ ಕೆಳಗಿನ ಮಹಡಿಗೆ ಟೇಬಲ್ ಬದಲಾಯಿಸಿ, ಅಲ್ಲಿಗೇ ಊಟಕ್ಕೆ ಹೊರಟಿದ್ದಾನೆ. ಆತ ಮೆಟ್ಟಿಲು ಇಳಿಯಬೇಕೆಂದರೆ ಅಲ್ಲಿಗೆ ಬಂದ ಸೈಫ್ ಕೆಟ್ಟದಾಗಿ ಬೈದಿದ್ದಾನೆ. ಮಾತ್ರವಲ್ಲ ಮುಖಕ್ಕೆ ಗುದ್ದಿದ್ದಾನೆ. ತಡೆಯಲು ಬಂದ ಇಕ್ಬಾಲ್ ಶರ್ಮಾನ ಮಾವ 68ರ ಹರೆಯದ ರಮಣ್‌ಭಾಯ್ ಪಟೇಲ್‌ನನ್ನು ಶಕೀಲ್ ಲಡಾಖ್ ಗುದ್ದಿ ನೆಲಕ್ಕೆ ತಳ್ಳಿದ್ದಾನೆ.

ತಮಾಷೆಯೆಂದರೆ ಹೀಗೆ ಇಬ್ಬರೂ ಹಲ್ಲೆ ನಡೆಸುತ್ತಿದ್ದಾಗ ಕರೀನಾ ಕಪೂರ್ ಮತ್ತು ಕರಿಷ್ಮಾ ಕಪೂರ್ ಅವರನ್ನು ತಡೆಯುವುದು ಬಿಟ್ಟು ಹುರಿದುಂಬಿಸುತ್ತಿದ್ದರಂತೆ! ಮಧ್ಯರಾತ್ರಿ ಆಸ್ಪತ್ರೆಗೆ ಹೋಗಿ ಬ್ಯಾಂಡೇಜ್ ಹಾಕಿಸಿಕೊಂಡು ಇಕ್ಬಾಲ್ ಶರ್ಮಾ ಕುಟುಂಬ ಪೊಲೀಸ್ ಠಾಣೆಯಲ್ಲಿ ದೂರು ನೀಡಿದೆ. ಕುಡಿದ ನಶೆಯಲ್ಲಿದ್ದ ಸೈಫ್‌ನನ್ನು ತಕ್ಷಣ ಬಂಧಿಸಬೇಕಿದ್ದ ಪೊಲೀಸರು, ಮರುದಿನ ಸಂಜೆ ಕರೆಸಿ ಎಫ್‌ಐಆರ್ ಹಾಕಿದ್ದಾರೆ. ಕೋರ್ಟಿನಲ್ಲಿ ಜಾಮೀನು ಸಿಕ್ಕಿದೆ!

ಸೈಫ್ ಅಲಿಯ ದುರ್ನಡತೆಯ ವರದಿ ಇದೇ ಮೊದಲಲ್ಲ. ಯುವಕನಾಗಿದ್ದಾಗಲೇ ಈ ರೀತಿ ಕುಡಿತ, ಕುಣಿತಗಳಿಗೆ ಸೈಫ್ ಹೆಸರುವಾಸಿಯಾಗಿದ್ದ. ಅಮೃತಾಸಿಂಗ್ ಜತೆ ಈತನ ಸಂಬಂಧದ ಬಗ್ಗೆ ಬರೆದ ವರದಿಗಾರನಿಗೆ ಬೆದರಿಕೆ ಹಾಕಿದ್ದ. ಸಿನಿಮಾ ಎಂಟ್ರಿಯ ಆರಂಭದಲ್ಲೇ ಈತನ ಅಶಿಸ್ತಿನಿಂದ ನೊಂದು ನಿರ್ದೇಶಕ ರಾಹುಲ್ ರವೈಲ್ ತನ್ನ ಚಿತ್ರ ಬೇಖುದಿ ಯಿಂದ ಸೈಫ್‌ನನ್ನು ಕೈಬಿಟ್ಟಿದ್ದ. ಅದಕ್ಕೂ ಮೊದಲು ಖ್ಯಾತ ನಿರ್ದೇಶಕ ಗುಲ್ಜಾರ್ ಈತನಿಗಾಗಿ ಚಿತ್ರವೊಂದನ್ನು ನಿರ್ದೇಶಿಸಹೊರಟಿದ್ದರು. ಆದರೆ ಈತನ ಅಶಿಸ್ತು ಗಮನಿಸಿ ಕೈಚೆಲ್ಲಿದ್ದರು.

ಹಳೆಯ ಕಥೆ ಏನೇ ಇದ್ದರೂ, ಈಗ ಸಾಕಷ್ಟು ಚಿತ್ರಗಳಲ್ಲಿ ನಟಿಸಿ, ವಯಸ್ಸೂ ಆಗಿ ಸೈಫ್ ಮಾಗಬೇಕಿತ್ತು. ಆದರೆ ಹಾಗೆ ಕಂಡುಬರುತ್ತಿಲ್ಲ. ಅಪ್ಪ ಜೂನಿಯರ್ ಪಟೌಡಿಯ ಸಜ್ಜನಿಕೆಯಾಗಲೀ, ಅಮ್ಮ ಶರ್ಮಿಳಾ ಠಾಗೋರ್‌ಗಳ ಬುದ್ಧಿವಂತಿಕೆಯಾಗಲೀ ಲವಲೇಶವೂ ಮಗನ ಬಳಿ ಇದ್ದಂತಿಲ್ಲ. ಹಣ, ಖ್ಯಾತಿ, ಹುಡುಗಿಯರ ಹುಚ್ಚಿನ ನಡುವೆ ಸೈಫ್‌ನೊಳಗಿರುವ ಹೀರೊ ಎಲ್ಲೋ ಕಳೆದುಹೋಗಿದ್ದಾನೆ. ನಿಜವಾದ ವಿಲನ್ ಹೊರಗೆ ಕಾಣಿಸಿಕೊಂಡಿದ್ದಾನೆ.

■ ಬಿಂದು